

# ಮನೆ ಶಿಫ್ಟ್ ಮಾಡ್ತಿದೀರಾ?



**ಒಂದು ಮನೆಯಿಂದ ಇನ್ನೊಂದು ಮನೆಗೆ ಶಿಫ್ಟ್ ಆಗುವುದು ಸುಲಭದ ಕೆಲಸವಲ್ಲ. ಆದರೆ ಪಕ್ಕಾ ಪೂರ್ವತಯಾರಿ ಮಾಡಿಕೊಂಡರೆ ನಿಮಗದು ಹೂವು ಎತ್ತಿದಷ್ಟು ಸರಳ!**

**■ ಸೋಮನಾಥ್ ಹಾವರಗಿ**

ಇತ್ತೀಚೆಗೆ ನಮ್ಮ ಸ್ನೇಹಿತರೊಬ್ಬರು ಮನೆಯನ್ನು ಬದಲಾಯಿಸಿದರು. ನಮ್ಮ ಮನೆಯ ಪಕ್ಕದ ಮನೆಗೆ ಬಂದರು. ನಾಲ್ಕು ಜನರ ಸಂಸಾರ. ನಮಗೂ ಸಂತೋಷವಾಯಿತು. ಆದರೆ ಬಂದ ಮೂರು ದಿನಗಳವರೆಗೆ ಅವರಿಗೆ ನಾವೇ ಊಟ, ತಿಂಡಿ ಬಡಿಸಬೇಕಾಯಿತು. ಅವರ ಲೈಟೋ, ನಲ್ಲಿಯೋ ರಿಪೇರಿ ಮಾಡಲು ಸಹಾಯ ಮಾಡಬೇಕಾಯಿತು. ಮೊದಲ ದಿನ ಅವರೆಲ್ಲ ನಮ್ಮ ಮನೆಯ ಹಾಲಿನಲ್ಲಿಯೇ ಮಲಗುವುದಕ್ಕೆ ನಮಗೆ ಹಾಸಿಗೆ, ಹೊದಿಕೆಯನ್ನು ಹೊಂದಿಸುವುದೂ ಬಹಳ ಕಷ್ಟವಾಯಿತು. ಅವರಿಗೂ ಮುಜುಗರ, ನಮಗೂ ಬಯಸದೇ ಬಂದ ಬವಣೆ. ಕೊನೆಗೂ ಸುಮಾರು 3–4 ದಿನಗಳ ನಂತರ ಅವರು ತಮ್ಮ ಮನೆಯಲ್ಲಿ ಅಡುಗೆ ಮಾಡಿಕೊಳ್ಳುವಷ್ಟು ಅಚ್ಚುಕಟ್ಟು ಬರುವ ಹೊತ್ತಿಗೆ ಅವರೆಂದರು– ನಾವು ಮನೆ ಬದಲಾಯಿಸುವ ಕೆಲಸವನ್ನು ಸ್ವಲ್ಪ ವ್ಯವಸ್ಥಿತವಾಗಿ ಮಾಡಿದ್ದರೆ ಚೆನ್ನಾಗಿತ್ತು!

ನಿಜ. ಬೇಸಿಗೆ ರಜ ಹಲವರಿಗೆ ಮೋಜು–ಮಸ್ತಿಯ ವೇಳೆ. ಒಂದು ಪ್ರವಾಸ ಮುಗಿಸುವ ವೇಳೆಗೆ ಮುಂದಿನ ವರ್ಷ ಎಲ್ಲಿಗೆ ಎಂದು ನಿಗದಿಯಾಗಿಬಿಟ್ಟಿರುತ್ತದೆ. ಮೂರು ತಿಂಗಳು ಮುಂಚಿನಿಂದಲೇ ತಯಾರಿಯೂ ಆಗಿರುತ್ತದೆ. ಸ್ವಂತ ವ್ಯವಸ್ಥೆಯಲ್ಲಿ ಸುಖಕರ ಪ್ರವಾಸ ಮಾಡಬಹುದು, ಇಲ್ಲವೇ ವ್ಯವಸ್ಥಿತ ಪ್ರವಾಸದ ಅನುಕೂಲವನ್ನೂ ಬಳಸಿಕೊಳ್ಳಬಹುದು. ಇನ್ನು ಕೆಲವು ಕುಟುಂಬಗಳಿಗೆ ಈ ಬಾರಿ ಆ ಮಜಾ ಇರುವುದಿಲ್ಲ. ಅವರಿಗೆ ಈ ರಜೆಯಲ್ಲಿ ಬಾಡಿಗೆ ಮನೆಯನ್ನು ಬದಲಾಯಿಸುವ ಕೆಲಸ ಇರುತ್ತದೆ. ಸಾಮಾನ್ಯವಾಗಿ ಮಾರ್ಚ್ ಹೊತ್ತಿಗೆ ಶೈಕ್ಷಣಿಕ ವರ್ಷ ಬಹುತೇಕ ಮುಗಿದಿರುವುದರಿಂದ ಏಪ್ರಿಲ್ –ಮೇ ತಿಂಗಳು ಮನೆ ಬದಲಾಯಿಸುವ ಉದ್ದೇಶಕ್ಕೆ ಸರಿಯಾದ ಸಮಯ. ಇದನ್ನು ಒಂದು ಯೋಜನೆಯ ರೀತಿಯಲ್ಲಿ ಪರಿಗಣಿಸಿ ಅದನ್ನು ಕ್ರಮಬದ್ಧವಾಗಿ ಸುಗಮವಾಗಿ ತೂಗಿಸಬಹುದು.

ನೀವು ಈಗಾಗಲೇ ನಿಮಗೆ ತಕ್ಕನಾದ ಹೊಸ ಮನೆಯನ್ನು ನಿಶ್ಚಯ ಮಾಡಿದ್ದೀರಿ; ಅದರ ಸುಣ್ಣಬಣ್ಣ ಕಾರ್ಯ ನಡೆದಿದೆ; ಮಕ್ಕಳಿಗಾಗಿ ಶಾಲೆಯನ್ನೂ ನೋಡಿಟ್ಟಿದ್ದೀರಿ ಅಂದುಕೊಳ್ಳೋಣ. ಈಗ ಉಳಿದಿರುವುದು ಈ ಮನೆಯಿಂದ ಆ ಮನೆಗೆ ನಿಮ್ಮ ಸಾಮ್ರಾಜ್ಯವನ್ನು ವರ್ಗಾಯಿಸುವ ಕೆಲಸ ಮಾತ್ರ. ಹಾಗೆ ನೋಡಿದರೆ ಮನೆ ಬದಲಾವಣೆ ಅಂಥ ಕ್ಲಿಷ್ಟಕರ ಕೆಲಸವೇನಲ್ಲ. ಆದರೂ ಸರಿಯಾದ ತಯಾರಿ ಮಾಡಿಕೊಳ್ಳದಿದ್ದರೆ ಸಾಕಷ್ಟು ಕಿರಿಕಿರಿಯಾಗಬಹುದು, ಹೆಚ್ಚು ಹಣ ಖರ್ಚಾಗಬಹುದು. ಬದಲಾವಣೆ ಕಾರ್ಯಕ್ರಮ ಸುಸೂತ್ರವಾಗಿ ನಡೆಯಲು ಕೂಲಂಕಷವಾದ ಒಂದು ಯೋಜನೆ ಮತ್ತು ಅದರ ಅನುಸರಣೆ ಸಹಕಾರಿ ಆಗಬಲ್ಲುದು. ಅಪಾರ್ಟ್‌ಮೆಂಟಿನಲ್ಲಿರುವ ಮನೆಯಾಗಿರಲಿ ಅಥವಾ ಸ್ವತಂತ್ರವಾದ ಮನೆಯಾಗಿರಲಿ ಕಾರ್ಯ–ಕ್ರಮದ ಪಟ್ಟಿ ಹೆಚ್ಚು– ಕಡಿಮೆ ಒಂದೇ ತರಹ ಇರುತ್ತದೆ.